**ಓ.ಎಸ್. ನಂ. 69/2024** **ಪಿ.ಡಬ್ಲ್ಯೂ- 1**

**ಸಾಕ್ಷಿಯನ್ನು ದಿನಾಂಕ 13.2.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆಃ ವಾದಿ ಪರ ವಕೀಲರಿಂದಃ**

ನಾನು ಹಲವು ದಾಖಲೆಗಳನ್ನು ಹಾಜರುಪಡಿಸಿದ್ದು ಅವುಗಳನ್ನು ಈಗ ನೋಡಿ ಗುರುತಿಸುತ್ತಿದ್ದೇನೆ. ದಿನಾಂಕ 1.7.1987ರ ಜಿ.ಪಿ.ಎ ಅನ್ನು ನಿಪಿ3 ಎಂದು, ದಿನಾಂಕ 30.10.2018ರ ನೋಂದಾಯಿತ ಕರಾರು ಪತ್ರವನ್ನು ನಿಪಿ4 ಎಂದು, ದಿನಾಂಕ 2.4.2024ರಂದು ಹೆಚ್.ಡಿ.ಕೋಟೆ ಪೋಲಿಸ್ ಠಾಣೆಗೆ ಮತ್ತು ಅರಣ್ಯ ಅಧಿಕಾರಿಗೆ ನೀಡಿರುವ ದೂರಿನ ಪ್ರತಿಗಳನ್ನು ನಿಪಿ5 ಮತ್ತು ನಿಪಿ6 ಎಂದು, ದಿನಾಂಕ 8.5.2024ರಂದು ಹೆಚ್.ಡಿ.ಕೋಟೆ ಪೋಲಿಸರಿಗೆ ನೀಡಿರುವ ದೂರಿನ ಪ್ರತಿಯನ್ನು ನಿಪಿ7 ಎಂದು, ದಿನಾಂಕ 16.4.2024ರಂದು ಪಿ.ಐ, ಹೆಚ್.ಡಿ.ಕೋಟೆ ರವರಿಗೆ ನೀಡಿರುವ ದೂರಿನ ಪ್ರತಿಯನ್ನು ನಿಪಿ8 ಎಂದು, ದಿನಾಂಕ 12.4.2024ರಂದು ಅರಣ್ಯಾಧಿಕಾರಿ, ಹೆಚ್.ಡಿ.ಕೋಟೆ ಇವರಿಗೆ ನೀಡಿರುವ ದೂರಿನ ಪ್ರತಿಯನ್ನು ನಿಪಿ9 ಎಂದು, ದಿನಾಂಕ 11.5.2024ರಂದು ಪ್ರತಿವಾದಿಯರಿಗೆ ವಕೀಲರ ಮೂಲಕ ನೀಡಿರುವ ನೋಟಿಸಿನ ಕಛೇರಿ ಪ್ರತಿಯನ್ನು ನಿಪಿ10 ಎಂದು, 27 ಅಂಚೆ ರಶೀದಿಗಳನ್ನು ಒಟ್ಟಾಗಿ ನಿಪಿ11 ಎಂದು, ಹದಿಮೂರು ಅಂಚೆ ಸ್ವೀಕೃತಿಗಳನ್ನು ನಿಪಿ12 ರಿಂದ ನಿಪಿ24 ಎಂದು, ಪ್ರತಿವಾದಿ 15 ರಿಂದ 18ರವರಿಗೆ ಸದರಿ ನೋಟಿಸ್ ಜಾರಿಯಾಗದೇ ವಾಪಸ್ ಬಂದಿದ್ದು ಅಂಚೆ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ನೋಡಲಾಗಿ ಅವುಗಳನ್ನು ನಿಪಿ25 ರಿಂದ ನಿಪಿ28 ಎಂದು, ಅದರಲ್ಲಿರುವ ನೋಟಿಸ್ ಪ್ರತಿಯನ್ನು ನಿಪಿ25ಎ ರಿಂದ ನಿಪಿ28ಎ ಎಂದು, ನನಗೆ ಸಂಬಂಧಪಟ್ಟ ಸಿಟಿ ಯೂನಿಯನ್ ಬ್ಯಾಂಕ್, ಮೈಸೂರಿನ ಖಾತ ನಕಲನ್ನು ನಿಪಿ29 ಎಂದು, ಎರಡು ಗ್ರಾಂಟ್ ಸರ್ಟಿಫಿಕೆಟುಗಳನ್ನು ನಿಪಿ30 ಮತ್ತು ನಿಪಿ31 ಎಂದು, ಮುತ್ತಿಲಮ್ಮನವರಿಗೆ ಸಂಬಂಧಪಟ್ಟ ಮರಣ ಪ್ರಮಾಣಪತ್ರವನ್ನು ನಿಪಿ32 ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸಾ.ಸ.ಇ.ಒ.

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ ಸಿ
ಹೆಚ್.ಡಿ.ಕೋಟೆ.